ಅಧ್ಯಕ್ಷರು : ಈಗ ಬೆಲೆಗಳೆಲ್ಲಾ ಜಾಸ್ತಿಯಾಗಿರುವುದರಿಂದ ದಾನ ಕೊಡುವವರು ಮಿನಿಮಮ್ ಇಷ್ಟು ಕೊಡಬೇಕು ಎಂದು ಹೇಳಿ ಏನಾದರೂ ಮಾಡುವುದಕ್ಕೆ ಸಾಧ್ಯವೇ ?

SRI K.M. KRISHNA REDDY : Beggers are not choosers.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್. ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು) : 38ನೇ ಪಟ್ಟಿಯಲ್ಲಿರುವ ಒಟ್ಟು 48 ಪ್ರಶ್ನೆಗಳ ಪೈಕಿ ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸಲಾಗಿದೆ.

ಬಳ್ಳಾರಿ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ

2933 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) *ಬಳ್ಳಾರಿ ನಗರಕ್ಕೆ ಕುಡಿಯುವ ನೀರನ್ನು ಕೊಡುವ ಸಲುವಾಗಿ, ಅಲ್ಲಿರುವ ಅಣೆಕಟ್ಟೆಯ ದುರಸ್ಥಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಕ್ಕಾಗಿ ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೆ ?*

2) *ಹಾಗಿದ್ದಲ್ಲಿ, ದುರಸ್ಥಿಗಾಗಿ ಅಂದಾಜು ಮಾಡಲಾದ ಅಂದಾಜು ಪಟ್ಟಿಯ ಮೊತ್ತ ?*

3) *ಟೆಂಡರ್‌ಗಳನ್ನು ಕರೆಯಲಾಗಿದೆಯೆ ?*

4) *ಹಾಗೂ 100 ಮೀ. ಉದ್ದದ ಹೊಸ ಕೊಳವೆ ಮಾರ್ಗವನ್ನು ಹಾಕಿ, ನೀರನ್ನು ಮೇಲುಮಟ್ಟದ ಜಲಸಂಗ್ರಹಾಗಾರಕ್ಕೆ ಪಂಪ್ ಮಾಡುವ ಕಾಮಗಾರಿಯನ್ನು ಸಹ, ಸರ್ಕಾರ ಕೈಗೆತ್ತಿಕೊಂಡಿದೆಯೇ ?*

5) *ದುರಸ್ಥಿ ಕಾಮಗಾರಿಯು ಮತ್ತು ಕೊಳವೆ ಮಾರ್ಗವನ್ನು ಹಾಕುವ ಕಾಮಗಾರಿಯು ಯಾವಾಗ ಪೂರ್ಣಗೊಳ್ಳುವುದು ?*

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

1) ಹೌದು.

2) ರೂ. 42.50 ಲಕ್ಷಗಳು.

3) ಕರೆಯಲಾಗಿದ್ದು, ಟೆಂಡರ್ ಅನುಮೋದನೆಗಾಗಿ, ಪರಿಶೀಲನೆಯ ಹಂತದಲ್ಲಿರುತ್ತದೆ.

4) ಹೌದು.

5) ಈಗಾಗಲೇ ಕಾಟನ್‌ಪೇಟೆ ಮಾರ್ಕೆಟ್ ಸರಹದ್ದಿನಲ್ಲಿ ಬರುವ ಮೇಲುಮಟ್ಟದ ಜಲಸಂಗ್ರಹಾಗಾರಕ್ಕೆ ಕೊಳವೆ ಮಾರ್ಗವನ್ನು ಹಾಕುವ ಕಾಮಗಾರಿಯು ಮುಗಿದಿದ್ದು, ಕೊಳವೆ